# ಕರ್ನಾಟಕ ಪಬ್ಲಿಕ್ ಸ್ಕೂಲ್ (ಪ್ರೌಢ ವಿಭಾಗ) ಧನ್ನೂರ ತಾ.ಹುನಗುಂದ ಜಿ.ಬಾಗಲಕೋಟ

## ಸೇತುಬಂಧ ಪರೀಕ್ಷೆ (ಸಾಫಲ್ಯ ಪರೀಕ್ಷೆ) – 2025-26

**ವರ್ಗ: 9** **ವಿಷಯ: ಕನ್ನಡ** **ದಿನಾಂಕ: -06-2025**

| | | | |
|---|---|---|---|
| **ವಿದ್ಯಾರ್ಥಿ/ನಿ ಹೆಸರು :** | | | **ಹಾಜರಿ ಸಂಖ್ಯೆ :** |
| **ಒಟ್ಟು ಎ ಶ್ರೇಣಿ :** | **ಒಟ್ಟು ಬಿ ಶ್ರೇಣಿ :** | **ಮೌಲ್ಯಮಾಪಕರ ಸಹಿ :** | |

*** ಈ ಕೆಳಗಿನ ಪ್ರಶ್ನೆಗಳಿಗೆ ನಾಲ್ಕು ಆಯ್ಕೆಗಳನ್ನು ಕೊಡಲಾಗಿದೆ. ಅವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ.**

1) ಕನ್ನಡ ವರ್ಣಮಾಲೆಯಲ್ಲಿರುವ ಸ್ವರಗಳ ಅಕ್ಷರಗಳ ಸಂಖ್ಯೆ ಎ) 49 ಬಿ) 13 ಸಿ) 5 ಡಿ) 25 **ಉತ್ತರ :** ____________

2) 'ಅನ್ವರ್ಥನಾಮ' ಪದಕ್ಕೆ ಉದಾಹರಣೆ ಎ) ಕುರುಡ ಬಿ) ಬೆಟ್ಟ ಸಿ) ತಾವು ಡಿ) ಮಹೇಶ **ಉತ್ತರ :** ____________

3) ಮಳೆಗಾಲ ಇದು ಯಾವ ಸಂಧಿಗೆ ಉದಾಹರಣೆಯಾಗಿದೆ? ಎ)ಆದೇಶ ಬಿ)ಸವರ್ಣದೀರ್ಘ ಸಿ)ಗುಣ ಡಿ)ವೃದ್ಧಿ **ಉತ್ತರ :** ____________

4) ನಾನು-ನಾವು ಇವು ಈ ಪುರುಷವಾಚಕ ಸರ್ವನಾಮಗಳು **ಉತ್ತರ :** ____________
ಎ) ಉತ್ತಮಪುರುಷ ಬಿ) ಮಧ್ಯಮಪುರುಷ ಸಿ) ಪ್ರಥಮಪುರುಷ ಡಿ) ಯಾವುದೂ ಅಲ್ಲ.

5) ಮಕ್ಕಳು ಹಾಡನ್ನು ಹಾಡುತ್ತಾರೆ. ಈ ವಾಕ್ಯ ಯಾವ ಕಾಲದಲ್ಲಿದೆ? **ಉತ್ತರ :** ____________
ಎ) ಭೂತಕಾಲ ಬಿ) ವರ್ತಮಾನಕಾಲ ಸಿ) ಭವಿಷ್ಯತ್ ಕಾಲ ಡಿ) ಯಾವುದೂ ಅಲ್ಲ

6) 'ವಿಷ್ಣುವರ್ಧನನು ತಲಕಾಡಿನಲ್ಲಿ ವಿಜಯನಾರಾಯಣನ ಗುಡಿಯನ್ನು ಕಟ್ಟಿಸಿದನು. – ಈ ವಾಕ್ಯದಲ್ಲಿ ಕರ್ತೃಪದ **ಉತ್ತರ :** ____________
(ಎ) ವಿಷ್ಣುವರ್ಧನನು (ಬಿ) ತಲಕಾಡಿನಲ್ಲಿ (ಸಿ) ವಿಜಯನಾರಾಯಣನ (ಡಿ) ಗುಡಿಯನ್ನು

7) ಗಾಯತ್ರಿಯು ಗಾಯನ ಸ್ಪರ್ಧೆಯಲ್ಲಿ ಬಹುಮಾನವನ್ನು ಗೆದ್ದಳು.' – ಈ ವಾಕ್ಯವು **ಉತ್ತರ :** ____________
(ಎ) ಸಾಮಾನ್ಯವಾಕ್ಯ (ಬಿ) ಸಂಯೋಜಿತವಾಕ್ಯ (ಸಿ) ಮಿಶ್ರವಾಕ್ಯ (ಡಿ) ಪ್ರಶ್ನಾರ್ಥಕವಾಕ್ಯ

8) ದ್ವಿತೀಯಾ ವಿಭಕ್ತಿ ಪ್ರತ್ಯಯ ಎ) ಅನ್ನು ಬಿ) ಅಲ್ಲಿ ಸಿ) ಇಂದ ಡಿ) ಅ **ಉತ್ತರ :** ____________

9) ದಿಗ್ವಾಚಕ ಪದ ಯಾವುದು? ಎ) ಹಲವು ಬಿ) ವಿಶೇಷ ಸಿ) ಪಶ್ಚಿಮ ಡಿ) ಮರ **ಉತ್ತರ :** ____________

10) ಹೆಮ್ಮರ – ಯಾವ ಸಮಾಸಕ್ಕೆ ಉದಾಹರಣೆ **ಉತ್ತರ :** ____________
ಎ)ತತ್ಪುರುಷ ಸಮಾಸ ಬಿ)ದ್ವಿಗು ಸಮಾಸ ಸಿ)ಬಹುವ್ರೀಹಿ ಸಮಾಸ ಡಿ) ಕ್ರಿಯಾ ಸಮಾಸ

**11. ಕೊಟ್ಟಿರುವ ಗದ್ಯಭಾಗವನ್ನು ಓದಿಕೊಂಡು, ಮುಂದಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

ಡಿ. ವಿ. ಜಿ. ಅವರು ಆಧುನಿಕ ಕನ್ನಡ ಸಾಹಿತ್ಯದ ದಿಗ್ಗಜರಲ್ಲಿ ಒಬ್ಬರು. 'ಕನ್ನಡ ಸಾರಸ್ವತಲೋಕದ ಭೀಷ್ಮ' ಎಂದು ಕರೆಯಿಸಿಕೊಂಡವರು. ಡಿ. ವಿ. ಜಿ. ಅವರ ಪೂರ್ಣ ಹೆಸರು ದೇವನಹಳ್ಳಿ ವೆಂಕಟರಮಣಯ್ಯ ಗುಂಡಪ್ಪ. ಇವರ ಹುಟ್ಟೂರು ಕೋಲಾರ ಜಿಲ್ಲೆಗೆ ಸೇರಿದ ಮುಳಬಾಗಿಲು. ಇವರ ತಂದೆಯ ಹೆಸರು ವೆಂಕಟರಮಣಯ್ಯ, ತಾಯಿಯ ಹೆಸರು ಅಲಮೇಲಮ್ಮ. ಡಿ. ವಿ. ಜಿ. ಅವರ ಮನಸ್ಸಿನ ಮೇಲೆ ಬಹಳ ಪ್ರಭಾವ ಬೀರಿದ ಇಬ್ಬರು ವ್ಯಕ್ತಿಗಳೆಂದರೆ ಒಬ್ಬರು ಅವರ ಅಜ್ಜಿ ಸಾಕಮ್ಮ; ಇನ್ನೊಬ್ಬರು ಅವರ ಸೋದರಮಾವ ತಿಮ್ಮಪ್ಪ. ಡಿ. ವಿ. ಜಿ. ಅವರ ಪ್ರಸಿದ್ಧ ಕೃತಿಯಾದ 'ಮಂಕುತಿಮ್ಮನ ಕಗ್ಗ'ದಲ್ಲಿ ಬರುವ ತಿಮ್ಮನ ಹೃದಯಸ್ಪರ್ಶಿ ಚಿತ್ರಣಕ್ಕೆ ಅವರ ಸೋದರಮಾವ ತಿಮ್ಮಪ್ಪನವರ ವ್ಯಕ್ತಿತ್ವವೇ ಆಧಾರವಾಗಿದೆ. ಡಿ. ವಿ. ಜಿ. ಅವರು ತಮ್ಮ ಪ್ರಾಥಮಿಕ ಶಿಕ್ಷಣವನ್ನು ಮುಳಬಾಗಿಲಿನಲ್ಲಿ ಪೂರ್ಣಗೊಳಿಸಿದರು.

**ಪ್ರಶ್ನೆಗಳು:**
* ಡಿ. ವಿ. ಜಿ. ಅವರ ಪೂರ್ಣ ಹೆಸರೇನು? **ಉತ್ತರ :** ________________________________________
* ಡಿ. ವಿ. ಜಿ. ಅವರ ಮನಸ್ಸಿನ ಮೇಲೆ ಪ್ರಭಾವ ಬೀರಿದ ಇಬ್ಬರು ವ್ಯಕ್ತಿಗಳು ಯಾರು? **ಉತ್ತರ :** ____________________

**12. ಕೊಟ್ಟಿರುವ ಪದ್ಯಭಾಗಕ್ಕೆ ಸಾರಾಂಶವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.**

ಗೆಳೆತನದ ಸುವಿಶಾಲ ಆಲದಡಿ ಪಸರಿಸಿಹ
ತಣ್ಣೆಳಲ ತಂಪಿನಲಿ ತಂಗಿರುವೆನು
ಜೀವನದನಂತ ದುರ್ಭರ ಬವಣೆ ನೋವುಗಳ
ಕಾವುಗಳ ಮೌನದಲಿ ನುಂಗಿರುವೆನು

**ಉತ್ತರ:**____________________________________________________________________
______________________________________________________________________________
______________________________________________________________________________
______________________________________________________________________________

**13. ಕೊಟ್ಟಿರುವ ವ್ಯಂಜನಾಕ್ಷರಗಳಿಗೆ ಸ್ವರ ಸೇರಿಸಿ ಪದ ರಚಿಸಿ ಬರೆಯಿರಿ.**

* ವ್+ಇ+ರ್+ಅ+ಗ್+ಆ+ಸ್+ಎ = ______________ * ವ್+ಯ್+ಆ+ಕ್+ಅ+ರ್+ಅ+ಣ್+ಅ = ________________

**14. ಕೊಟ್ಟಿರುವ ಸಂಯುಕ್ತಾಕ್ಷರಗಳಲ್ಲಿ ಸಜಾತಿ ಸಂಯುಕ್ತಾಕ್ಷರ ಮತ್ತು ವಿಜಾತಿ ಸಂಯುಕ್ತಾಕ್ಷಗಳಾವುವು ಹೆಸರಿಸಿರಿ.**

* ಕಸ್ತೂರಿ – ____________ * ಮಹಾತ್ಮ : ____________
* ಕನ್ನಡ – ____________ * ವ್ಯಕ್ತಿತ್ವ – ____________

**15. ಕೊಟ್ಟಿರುವ ಪದಗಳನ್ನು ನಾಣ್ಣುಡಿ, ಪದಪುಂಜ, ನುಡಿಗಟ್ಟು, ಸೌಮ್ಯೋಕ್ತಿಗಳನ್ನು ಪುನಃ ತಪ್ಪಿಲ್ಲದೇ ಬರೆಯಿರಿ.**

* ಅಂಗೈಯಲ್ಲಿ ಜೀವ ಹಿಡಿದುಕೊ **ಉತ್ತರ:**____________________ * ತಲೆದೂಗು **ಉತ್ತರ:**____________________
* ಪೀಠಿಕೆ ಹಾಕು **ಉತ್ತರ:**____________________ * ಮನಸ್ಸಿದ್ದರೆ ಮಾರ್ಗ **ಉತ್ತರ:**____________________

16. ಕೊಟ್ಟಿರುವ ಪದಗಳನ್ನು ಸ್ವಂತ ವಾಕ್ಯದಲ್ಲಿ ಬಳಸಿ ಬರೆಯಿರಿ.

* ಸಂಪಾದನೆ :______________________________ *

ಬಡವರು :______________________________

17. ಈ ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ಬರೆಯಿರಿ.

ಕೆಲರು ಗೋದಿಯ ಸಾಮೆಯನು ಕೆಲ

ಕೆಲರು ನವಣೆಯ ಕಂಬು ಜೋಳವ

ಕೆಲರು ಹಾರಕವೆಂದು ಕೆಲವರು ನೆಲ್ಲನತಿಶಯವ ಛಂದಸ್ಸಿನ ಹೆಸರು : ______________

18. ಈ ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಸಮನ್ವಯಗೊಳಿಸಿರಿ.

ಸೀತೆಯ ಮುಖ ಕಮಲದಂತೆ ಅರಳಿತು

*ಉಪಮೇಯ ________ *ಉಪಮಾನ : ________ * ಉಪಮಾವಾಚಕ: ________ *ಸಮಾನ ಧರ್ಮ: ________

* ಅಲಂಕಾರ : ____________

*ಸಮನ್ವಯ:______________________________

* ಲಕ್ಷಣ:______________________________

19. ಈ ಕೆಳಗೆ ಕೊಟ್ಟಿರುವ ಗಾದೆಮಾತುಗಳಲ್ಲಿ ಯಾವುದಾದರೂ ಒಂದನ್ನು ವಿಸ್ತರಿಸಿ ಬರೆಯಿರಿ. .

* ಹಾಸಿಗೆ ಇದ್ದಷ್ಟು ಕಾಲುಚಾಚು * ಅತಿಯಾಸೆ ಗತಿಗೇಡು * ಹೆತ್ತತಾಯಿ ಹೊತ್ತನಾಡು ಸ್ವರ್ಗಕ್ಕಿಂತ ಮಿಗಿಲಿ

**ಉತ್ತರ:**______________________________

20. ನೀವು ಧಾರವಾಡ ಸರಕಾರಿ ಪ್ರೌಢ ಶಾಲೆಯಲ್ಲಿ ಓದುತ್ತಿರುವ ಶರತ್/ಶ್ರೇಯಾ ಎಂದು ಭಾವಿಸಿ ಶೈಕ್ಷಣಿಕ ಪ್ರವಾಸಕ್ಕೆ ಹೋಗಲು 1000 ರೂಪಾಯಿ ಕಳಿಸಿಕೊಡುವಂತೆ ಲಕ್ಷ್ಮೇಶ್ವರದ ಸೋಮೇಶ್ವರ ನಗರದಲ್ಲಿ ವಾಸವಾಗಿರುವ ನಿಮ್ಮ ತಂದೆ ಶರತ ಅವರಿಗೊಂದು ಪತ್ರ ಬರೆಯಿರಿ. **ಅಥವಾ**

ಈ ಕೆಳಗಿನ ವಿಷಯಗಳಲ್ಲಿ ಯಾವುದಾದರೂ ಒಂದನ್ನು ಕುರಿತು ಹದಿನೈದು ವಾಕ್ಯಗಳಿಗೆ ಕಡಿಮೆ ಇಲ್ಲದಂತೆ ಪ್ರಬಂಧ ಬರೆಯಿರಿ.

* ದೂರದರ್ಶನ * ಗ್ರಂಥಾಲಯ * ರಾಷ್ಟ್ರೀಯ ಭಾವೈಕ್ಯತೆ

**ಉತ್ತರ:**______________________________